# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. :68 ಫಿರ್ಯಾ.ಸಾ. : 63**

| | | |
|---|---|---|
| ಸಾಕ್ಷಿಯ ಹೆಸರು | : | ನವೀನ್ ಸುರೇಶ್ ನಾಯ್ಕ |
| ತಂದೆಯ ಹೆಸರು | : | ಸುರೇಶ್ ನಾಯ್ಕ |
| ವಯಸ್ಸು | : | 35 ವರ್ಷ |
| ಕೆಲಸ | : | ಪೊಲೀಸ್ ಉಪ ನಿರೀಕ್ಷಕರು, ಭಟ್ಕಳ ನಗರ ಪೊಲೀಸ್ ಠಾಣೆ |
| ವಾಸ | : | ಭಟ್ಕಳ |

**ದಿನಾಂಕಃ 13-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಅಕ್ಟೋಬರ್ 2017 ರಿಂದ ಡಿಸೆಂಬರ್ 2019 ರವರೆಗೆ ನಾನು ಕಾರವಾರದ ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.17-10-2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 10.30 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ, ತನ್ನ ಅಳಿಯ ಪ್ರೇಮ್ ಕುಮಾರ್ ನಾಯರ್ ರವರು ಕಾಣೆಯಾದ ಬಗ್ಗೆ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನಾ ನಂ.139/2018 ರಲ್ಲಿ ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿ ಹಾಗೂ ದೂರನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಕಳುಹಿಸಿರುತ್ತೇನೆ.

2. ಚಾಸಾ-1 ರವರು ನೀಡಿದ ದೂರಿನಲ್ಲಿ ದಿ.16-10-2018 ರಂದು ಪ್ರೇಮ್ ಕುಮಾರ್ ನ ಮೊಬೈಲಿಗೆ ಆತನ ಗೆಳೆಯನಾದ ಮುಸ್ತಾಕ್ ಎಂಬುವವರು ಕರೆ ಮಾಡಿ, ಬರುವಂತೆ ಹೇಳಿದ ಮೇರೆಗೆ, ಪ್ರೇಮ್ ಕುಮಾರ್ ನು ಹೋಗಿದ್ದು, ಆನಂತರ ಆತ ಪುನಃ ವಾಪಾಸು ಬಂದಿರುವುದಿಲ್ಲ ಎಂದು ದೂರು ನೀಡಿದ್ದರಿಂದ, ಅದೇ ದಿನ ಅಂದರೆ ದಿ.17-10-2018 ರಂದು ತನಿಖೆಯನ್ನು ಮುಂದುವರಿಸಿ, ಕಾಣೆಯಾದ ಪ್ರೇಮ್ ಕುಮಾರ್ ನ ಮೊಬೈಲ್ ನಂಬರುಗಳಾದ

9964319067 ಮತ್ತು 9483665917 ಮತ್ತು ಆತನ ಗೆಳೆಯನಾದ ಮುಸ್ತಾಕ್ ನ ಮೊಬೈಲ್ ನಂ.9731684483 ಗಳ ಸಿ.ಡಿ.ಆರ್. ಗಳನ್ನು ಪೂರೈಸುವಂತೆ ಪೊಲೀಸ್ ಅಧೀಕ್ಷಕರು, ಕಾರವಾರ ರವರಿಗೆ ಕೋರಿಕೊಂಡಿರುತ್ತೇನೆ. ದಿ.18-10-2018 ರಂದು ಕಾರವಾರ ಪೊಲೀಸ್ ಅಧೀಕ್ಷಕರ ಕಚೇರಿಯಿಂದ ಪ್ರೇಮ್ ಕುಮಾರ್ ನ ಹಾಗೂ ಆತನ ಗೆಳೆಯ ಮುಸ್ತಾಕ್ ನ ಮೊಬೈಲು ನಂಬರುಗಳ ಸಿ.ಡಿ.ಆರ್. ಮಾಹಿತಿ ಬಂದಿದ್ದು, ಅದನ್ನು ಪರಿಶೀಲಿಸಿದಾಗ ಸದರಿ ಸಿ.ಡಿ.ಆರ್. ನಲ್ಲಿ 2 ನೇ ಆರೋಪಿ ಮುಸ್ತಾಕ್ ಗೆ ಸೇರಿದ ಮತ್ತೊಂದು ಮೊಬೈಲ್ ನಂ.9449348594 ರಿಂದ ದಿ.16-10-2018 ರಂದು ಮಧ್ಯಾಹ್ನ 3.00 ಗಂಟೆಗೆ ಪ್ರೇಮ್ ಕುಮಾರ್ ನ ಮೊಬೈಲ್ ನಂ. 9964319067 ಕರೆ ಮಾಡಿರುವುದು ಕಂಡುಬಂದಿರುತ್ತದೆ ಹಾಗೂ ಈ ಹಿಂದೆಯೂ ಸಹ ಅನೇಕ ಬಾರಿ ಪ್ರೇಮ್ ಕುಮಾರ್ ನಿಗೆ ಕರೆ ಮಾಡಿರುವುದು ಕಂಡುಬಂದಿರುತ್ತದೆ. ಆದ್ದರಿಂದ 2 ನೇ ಆರೋಪಿಯ ಮೇಲೆ ಸಂಶಯ ಬಂದು ಆತನ ಪತ್ತೆಗಾಗಿ ಸಿಬ್ಬಂದಿಗಳಾದ ಚಾಸಾ-44 ಮತ್ತು 47 ರವರನ್ನು ನೇಮಿಸಿ ಕಳುಹಿಸಿರುತ್ತೇನೆ ಹಾಗೂ ಆನಂತರ 2 ನೇ ಆರೋಪಿಯು ಪ್ರೇಮ್ ಕುಮಾರ್ ನಿಗೆ ಕರೆ ಮಾಡಿದ ಮೊಬೈಲ್ ನಂ. 9449348594 ನೇದರ ಸಿ.ಡಿ.ಆರ್. ಒದಗಿಸುವಂತೆ ಪೊಲೀಸ್ ಅಧೀಕ್ಷಕರ ಕಚೇರಿಗೆ ಕೋರಿಕೊಂಡಿರುತ್ತೇನೆ.

3. ದಿ.21-10-2018 ರಂದು ಚಾಸಾ-1 ರವರು ಪುನಃ ಠಾಣೆಗೆ ಹಾಜರಾಗಿ, ತನ್ನ ಅಳಿಯನಾದ ಪ್ರೇಮ್ ಕುಮಾರ್ ಅಪಹರಣವಾಗಿರುತ್ತಾನೆಂದು 1 ಮತ್ತು 2 ನೇ ಆರೋಪಿತರು ಹಾಗೂ ಇತರರ ಮೇಲೆ ದೂರನ್ನು ನೀಡಿದ್ದು, ಸದರಿ ದೂರನ್ನು ಚಾಸಾ-67 ರವರು ಸ್ವೀಕರಿಸಿಕೊಂಡು, ಠಾಣಾ ಗುನ್ನಾ ನಂ.141/2018 ರಲ್ಲಿ ಪ್ರಕರಣ ದಾಖಲಿಸಿ, ಪ್ರ.ವ. ವರದಿ ಹಾಗೂ ದೂರನ್ನು ನ್ಯಾಯಾಲಯಕ್ಕೆ ಕಳುಹಿಸಿ, ನಂತರ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ನನಗೆ ನೀಡಿರುತ್ತಾರೆ. ಅದೇ ದಿನ ಮುಸ್ತಾಕ್ ನ ಮೊಬೈಲ್ ನಂ.9449348594 ನೇದರ ಸಿ.ಡಿ.ಆರ್. ಮಾಹಿತಿಯು ಪೊಲೀಸ್ ಅಧೀಕ್ಷಕರ ಕಚೇರಿಯಿಂದ ಬಂದಿರುತ್ತದೆ. ಮೇಲೆ ಹೇಳಿದ ಎಲ್ಲಾ ನಾಲ್ಕೂ ಮೊಬೈಲ್ ನಂಬರುಗಳ ಸಿ.ಡಿ.ಆರ್. ಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಮೊಬೈಲ್ ನಂಬರುಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದ ಒಟ್ಟು 75 ಮೊಬೈಲ್ ನಂಬರುಗಳ ಸಿ.ಡಿ.ಆರ್. ಮಾಹಿತಿಯನ್ನು ನೀಡುವಂತೆ ಪೊಲೀಸ್ ಅಧೀಕ್ಷಕರ ಕಚೇರಿಗೆ ಕೋರಿಕೊಂಡಿರುತ್ತೇನೆ. ನಂತರ ಈ ಪ್ರಕರಣವನ್ನು ಮುಂದಿನ ತನಿಖೆಗಾಗಿ ಚಾಸಾ-69 ರವರು ವಹಿಸಿಕೊಂಡಿದ್ದು, ಪ್ರಕರಣದ ಕಡತವನ್ನು ಅವರಿಗೆ ಹಸ್ತಾಂತರಿಸಿರುತ್ತೇನೆ.

4. ದಿ.22-10-2018 ರಂದು ತನಿಖಾಧಿಕಾರಿಯಾದ ಚಾಸಾ-69 ರವರು ನನಗೆ 2 ಮತ್ತು 3 ನೇ ಆರೋಪಿತರನ್ನು ಪತ್ತೆ ಹಚ್ಚಿ ತಂದು ಹಾಜರುಪಡಿಸುವಂತೆ ಮೌಖಿಕವಾಗಿ ಸೂಚಿಸಿದ್ದು, ಅದರಂತೆ ನಾನು ನಮ್ಮ ಸಿಬ್ಬಂದಿಗಳಾದ ಚಾಸಾ-44, 45 ಮತ್ತು 47 ರವರನ್ನು ಕರೆದುಕೊಂಡು 2 ಮತ್ತು 3 ನೇ ಆರೋಪಿತರ ಪತ್ತೆಗಾಗಿ ದಾಂಡೇಲಿಗೆ ಹೋಗಿ ಹುಡುಕಾಟ ನಡೆಸಿ, ದಾಂಡೇಲಿಯ ಮಾರುತಿ ನಗರದಲ್ಲಿರುವ 2 ನೇ ಆರೋಪಿಯ ಮನೆಯ ಬಳಿ ಆತನಿಗಾಗಿ ಕಾಯುತ್ತಿದ್ದಾಗ, ದಿ.23-10-2018 ರಂದು ಬೆಳಿಗ್ಗಿನ ಜಾವ 2.30 ಗಂಟೆಯ ಸಮಯದಲ್ಲಿ 2 ನೇ ಆರೋಪಿಯು ತನ್ನ ಮನೆಯ ಕಡೆಗೆ ನಡೆದುಕೊಂಡು ಹೋಗುತ್ತಿದ್ದು, ನಾನು ಹಾಗೂ ನಮ್ಮ ಸಿಬ್ಬಂದಿಗಳು ಆತನನ್ನು ಸುತ್ತುವರಿದು, ಆತನಿಗೆ ನಮ್ಮ ಪರಿಚಯವನ್ನು ಹೇಳಿ ಹಾಗೂ ಆತನ ಹೆಸರು ಕೇಳಲಾಗಿ, ತನ್ನ ಹೆಸರು ಮುಸ್ತಾಕ್ ಅಹಮದ್ ಶೇಖ್ ಎಂದು ಹೇಳಿದ್ದು, ನಾವು ಆತನಿಗೆ ದೂರು ದಾಖಲಾದ ಬಗ್ಗೆ ಮಾಹಿತಿ ನೀಡಿ, ಆತನನ್ನು ವಶಕ್ಕೆ ಪಡೆದು ಕರೆದುಕೊಂಡು ಬಂದು, ಅದೇ ದಿನ ಬೆಳಿಗ್ಗೆ 5.30 ಗಂಟೆಗೆ ತನಿಖಾಧಿಕಾರಿಯ ಮುಂದೆ ಪೊಲೀಸ್ ಠಾಣೆಯಲ್ಲಿ ಹಾಜರುಪಡಿಸಿರುತ್ತೇವೆ. ಈಗ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ